## ಅವೇ ಧಾರಾವಾಹಿ-ಅವೇ ಪ್ರಶಸ್ತಿ

ಕಲರ್ಸ್ ಕನ್ನಡ ಅನುಬಂಧ ಪ್ರಶಸ್ತಿಗಳ ಆಯ್ಕೆ ಬಗ್ಗೆ ದಿನವೂ ವೀಕ್ಷಕರಿಗೆ ವೋಟ್ ಮಾಡುವ ವಿನಂತಿಗಳು ಬರುತ್ತಿವೆ. ತಮಾಷೆಯೆಂದರೆ, ಐದು ವರ್ಷಗಳ ಹಿಂದೆ ಶುರುವಾಗಿದ್ದ ಅವೇ ಧಾರಾವಾಹಿಗಳು ಇನ್ನೂ ಕಣದಲ್ಲಿ ಇವೆ. ಅದೇ ಕುಲವಧು, ಪುಟ್ಟಗೌರಿ, ಅಗ್ನಿ ಸಾಕ್ಷಿ, ಲಕ್ಷ್ಮೀಬಾರಮ್ಮ, ಅಕ್ಕ, ಮನೆದೇವ್ರು.

ಅದೇ ಸಂಸಾರ, ಅದೇ ಜೋಡಿ, ಅದೇ ಕಥೆ, ಅದೇ ಗೋಳನ್ನು ಜನರು ಎಷ್ಟು ಸಲ ಮೆಚ್ಚಲು ಸಾಧ್ಯ. ಈಗಿರುವ ಪ್ರಶಸ್ತಿಗಳಿಗೆ ವಿರುದ್ಧವಾದ ಪ್ರಶಸ್ತಿಗಳನ್ನು ಕೊಟ್ಟು ಜಾಣ ಪ್ರೇಕ್ಷಕರಿಗೆ ಸ್ವಲ್ಪ ಖುಷಿಯನ್ನಾದರೂ ಕೊಡಿ.

—ಇಂದು, ತಿಪಟೂರು

## ದಾಂಪತ್ಯ ನೀತಿಯ ಸಂದೇಶ

ಚಂದನ ವಾಹಿನಿಯಲ್ಲಿ 'ನಿನಗೆ ನಾನು ನನಗೆ ನೀನು' ಎಂಬ ಎರಡು ಸಾಲಿನಿಂದ ಆರಂಭವಾಗುವ ದಾಂಪತ್ಯ ಜೀವನದ ಸರಳವಾದ ನೀತಿ ಸಂಗಾತಿ–ಸಂಪ್ರೀತಿ ಎಂಬ ಕಾರ್ಯಕ್ರಮವು ನೂರು ಸಂಚಿಕೆಗಳನ್ನು ದಾಟಿ ಮುಂದಕ್ಕೆ ಅಡಿ ಇಡುತ್ತಿರುವುದು ಸಂತಸ ಮತ್ತು ಹೆಮ್ಮೆಯ ಸಂಗತಿ.

ಪ್ರಸ್ತುತ ಸಾಮಾಜಿಕ ಜೀವನದಲ್ಲಿ ದಂಪತಿ ಹಣ, ಕೀರ್ತಿ, ಪದವಿ, ಜೊತೆಯಲ್ಲಿ ನೀನಾ– ನಾನಾ ಎಂಬ ಅಹಮಿಕೆಯನ್ನು ಬೆಳೆಸಿಕೊಂಡು ಬೇರ್ಪಡೆಯಾಗುತ್ತಿರುವುದು ವಿಷಾದವೆನಿಸುತ್ತದೆ. ಇಂಥವರಿಗೆ ಇದು ನೀತಿ ಪಾಠ ಎನ್ನಬಹುದು. ಭಾನುವಾರ ಸಂಜೆ 7ಕ್ಕೆ ಪ್ರಸಾರವಾಗುವ ಈ ಕಾರ್ಯಕ್ರಮ ಸೋಮವಾರ 10 ಗಂಟೆಗೆ ಮರು ಪ್ರಸಾರವಾಗುತ್ತಿತ್ತು. ಇತ್ತೀಚೆಗೆ ಸಮಯ ಬದಲಾವಣೆಯಾಗಿ ಸೋಮವಾರ ಸಂಜೆ 7ಕ್ಕೆ ಒಮ್ಮೆ ಪ್ರಸಾರವಾಗಿ ಮಂಗಳವಾರ ಬೆಳಿಗ್ಗೆ 10 ಗಂಟೆಗೆ ಮರು ಪ್ರಸಾರವಾಗುತ್ತದೆ.

ಇತ್ತೀಚೆಗೆ ಪ್ರಸಿದ್ಧ ಕೊಳಲು ಗಾಯಕ ಪ್ರವೀಣ್ ಗೋಡ್ಖಿಂಡಿ ದಂಪತಿ ಸಂವಾದ ಕಾರ್ಯಕ್ರಮದಲ್ಲಿ ಭಾಗವಹಿಸಿ ಯಶಸ್ವಿಯಾಗಿ ನಡೆಸಿಕೊಟ್ಟರು.

—ಲಲಿತಾ ಅಂಬಾಗಿಲು, ಉಪ್ಪುಂದ

ವಾರದ ಪತ್ರ

## ಅನುರಾಗದ 'ಸಂಗಾತಿ ಸಂಪ್ರೀತಿ'

ಚಂದನ ಕನ್ನಡ ವಾಹಿನಿಯಲ್ಲಿ ಇತ್ತೀಚೆಗೆ ಎರಡು ಸಂಚಿಕೆಗಳಲ್ಲಿ 'ಸಂಗಾತಿ ಸಂಪ್ರೀತಿ' ಕಾರ್ಯಕ್ರಮದಲ್ಲಿ ಶತಾಯುಷಿ ಸ್ವಾತಂತ್ರ್ಯ ಹೋರಾಟಗಾರ ಎಚ್.ಎಸ್. ದೊರೆಸ್ವಾಮಿ ಮತ್ತು ಲಲಿತಮ್ಮ ದೊರೆಸ್ವಾಮಿ ಇವರ ಜೀವನ ಯಾತ್ರೆಯ ಸಂದರ್ಶನ ನಡೆಯಿತು. ಈ ಸಂದರ್ಶನವನ್ನು ಶಶಿಧರ ಕೋಟೆ ಮತ್ತು ಸೀತಾ ಕೋಟೆಯವರು ನಡೆಸಿ ಕೊಟ್ಟರು. ಸಂಗಾತಿ ಸಂಪ್ರೀತಿ ಕಾರ್ಯಕ್ರಮವು ಈಗಾಗಲೇ ಒಂದು ನೂರು ಸಂಚಿಕೆಗಳನ್ನು ದಾಟಿದೆ. ಅದರಲ್ಲಿ ಅನೇಕ ಗಾಯಕರು, ನಟರು, ಕವಿಗಳು, ಲೇಖಕರು ಬಂದು ತಮ್ಮ ಜೀವನದ ಸಂಪ್ರೀತಿಯನ್ನು ವೀಕ್ಷಕರ ಮುಂದೆ ಯಾವ ಮುಜುಗರವಿಲ್ಲದೇ ಹಂಚಿಕೊಂಡಿದ್ದಾರೆ. ಇಂದಿನ ಯುವ ದಂಪತಿಗಳಿಗೆ ಜೀವನ ಯಾತ್ರೆಯಲ್ಲಿ ತಾವು ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ, ವಹಿಸಬೇಕಾದ ಎಚ್ಚರಿಕೆಯ ಬಗ್ಗೆ ಮತ್ತು ಹೊಂದಾಣಿಕೆ ಜೀವನವನ್ನು ಹೇಗೆ ರೂಪಿಸಿಕೊಳ್ಳಬೇಕು ಎಂಬುದರ ಕುರಿತು ದಾಂಪತ್ಯ ದೀಪಿಕೆಯನ್ನು ತೆರೆದಿಟ್ಟಿದ್ದಾರೆ. ಒಳ್ಳೆಯ ಮಾರ್ಗದರ್ಶಕವೂ ಹೌದು.

ಪ್ರಸ್ತುತ ಸಂದರ್ಶನದಲ್ಲಿ ಸ್ವಾತಂತ್ರ್ಯ ಹೋರಾಟಗಾರ ಎಚ್.ಎಸ್. ದೊರೆಸ್ವಾಮಿಯವರು ತಮ್ಮ ಸ್ವಾತಂತ್ರ್ಯ ಹೋರಾಟದ ಜೀವನ ಮತ್ತು ಬಾಳ ಸಂಗಾತಿ ಜೊತೆಗಿನ ಸವಿ ನೆನಪುಗಳನ್ನು ಹಂಚಿಕೊಂಡರು. ಜೀವನದ ಹೋರಾಟದಲ್ಲಿ ಚಿಕ್ಕ ಪುಟ್ಟ ಭಿನ್ನಾಭಿಪ್ರಾಯಗಳು ಬರುವುದುಂಟು. ಮನುಷ್ಯನಿಗೆ ಸ್ವಲ್ಪ ತಾಳ್ಮೆ ಇದ್ದರೆ ಅವುಗಳನ್ನು ನಿವಾರಿಕೊಂಡು ನಗು ನಗುತ್ತಾ ಜೀವನವನ್ನು ಸಂತೋಷದಿಂದ ಸಾಗಿಸಬಹುದು ಎಂದು ಮಾರ್ಮಿಕವಾಗಿ ನುಡಿದರು. ಅದರಂತೆ ಲಲಿತಮ್ಮ ತಾವು ತಮ್ಮ ಪತಿಯೊಡನೆ ಜಗಳವಾಡಿದ್ದನ್ನು, ಪತಿಯ ಸ್ವಾತಂತ್ರ್ಯ ಹೋರಾಟದಲ್ಲಿ ಅವರಿಗೆ ಪೂರಕವಾಗಿ ನಿಂತು ಜೀವನ ನಿಭಾಯಿಸಿದ್ದನ್ನು ನಗುನಗುತ್ತ ವಿವರಿಸಿದರು. ಕೊನೆಯಲ್ಲಿ 'ಮನುಷ್ಯನು ಜೀವನದಲ್ಲಿ ಹುಚ್ಚಾಟವನ್ನು (ಹುಡುಗಾಟವನ್ನು) ಬಿಡಬೇಕು. ತಾಳ್ಮೆಯನ್ನು ಕಾಯ್ದುಕೊಳ್ಳಬೇಕು, ದುಡುಕಬಾರದು, ಕೆಟ್ಟ ಸಂಗತಿಗಳಿಗೆ ಮನಸ್ಸು ಹರಿಯದಂತೆ ಗಟ್ಟಿಯಾಗಿರಬೇಕು' ಎಂಬ ಮಾರ್ಮಿಕ ಸಲಹೆಗಳನ್ನು ನೀಡಿದರು.

—ಕೆ.ಪಿ. ರಾಮಗುಂಡಿ, ಬೈಲಹೊಂಗಲ

## ಮಾನವೀಯ ಡ್ರಾಮಾ

ಝೀ ಕನ್ನಡದ ಡ್ರಾಮಾ ಜ್ಯೂನಿಯರ್ ಕನ್ನಡನಾಡಿನ ಎಲೆ ಮರೆಯ ಬಾಲ ಪ್ರತಿಭೆಗಳನ್ನು ಗುರುತಿಸಿ ಅವರ ಕಲಾಪ್ರತಿಭೆಯನ್ನು ಪರಿಚಯ ಮಾಡುತ್ತಿದ್ದು, ಈ ವಾಹಿನಿಗೆ ಧನ್ಯವಾದಗಳು. ಅರ್ಥಪೂರ್ಣ ನಿರೂಪಣೆ, ಕಲಾವಿದರಲ್ಲಿನ ಸೂಕ್ಷ್ಮಗಳನ್ನು ಗುರುತಿಸುವ ಪ್ರತಿಭಾವಂತ ನಿರ್ಣಾಯಕರು, ನೈಜತೆಗೆ ಒತ್ತು ಕೊಡುವ ಘಟನೆಗಳ ಕಥಾ ಹಂದರಗಳು... ಈ ಎಲ್ಲ ಅಂಶಗಳಿಂದ ಸಮಾಜಕ್ಕೆ ಅರ್ಥಪೂರ್ಣ ಮಾನವೀಯ ಸಂದೇಶ ಕೊಡುತ್ತದೆ.

—ಸಾವಿತ್ರಮ್ಮ ಕೆ. ವಿಭೂತಿ, ಹರಿಹರ

## ತಾಳ್ಮೆಯ ಪರೀಕ್ಷೆ

ಪುಟ್ಟ ಗೌರಿ ಬೌದ್ಧಿಕವಾಗಿ ದೊಡ್ಡವಳಾಗೋದು ಯಾವಾಗ? ಈ ಧಾರಾವಾಹಿಯ ಧರ್ಮರಾಜ, ತೇಜಾ ಹಾಗೂ ಸಾಗರಿಯವರ ಹುಚ್ಚಾಟ ನಿಲ್ಲೋದು ಯಾವಾಗ? ಗೌರಿ ಅವರ ಮೇಲೆ ಸೇಡು ತೀರಿಸಿಕೊಳ್ಳುವ ಛಲ ವಿಚಿತ್ರವಾಗಿದೆ. ಹೋಗಲಿ ಬಿಡಿ ಎಂದು ಗಂಡನಿಗೆ ಮತ್ತೊಂದು ಮದುವೆ ಮಾಡಿದ ಗೌರಿಗೆ ಮುಂದಿನ ಜೀವನವೇ ಇಲ್ಲದಾಗ ಸೇಡಿನ ಕಿಡಿಯಿಂದ ಪ್ರಯೋಜನವಾದರೂ ಏನು? ವೀಕ್ಷಕರ ತಾಳ್ಮೆಯ ಪರೀಕ್ಷೆಯೂ ಸಾಕಲ್ಲವೆ?

ಸಾಗರಿ ಮತ್ತು ಧರ್ಮ ಮಾನವೀಯತೆ ಮರೆತು ಎಸಗುವ ಅಮಾನವೀಯ ಕೃತ್ಯಗಳು ನಮ್ಮಂಥವರಿಗೆ ಸಮಾಜದ ಬಗ್ಗೆ ಭೀತಿ ಹುಟ್ಟಿಸುತ್ತದೆ.

'ಪುಟ್ಟ ಗೌರಿ'ಯ ಧರ್ಮ– ಸಾಗರಿ, ಲಕ್ಷ್ಮಿ ಬಾರಮ್ಮ ಧಾರಾವಾಹಿಯ ಕುಮುದಾ–ಮನೋಜ್ಞ ಮತ್ತು 'ಅಗ್ನಿಸಾಕ್ಷಿ'ಯ ಚಂದ್ರಿಕಾ ಇಂಥವರೆಲ್ಲಾ ಸಮಾಜದಲ್ಲಿರುವಾಗ ಗಾಂಧೀಜಿಯವರು ಕಂಡ 'ರಾಮ ರಾಜ್ಯ'ದ ಕನಸು ಹೇಗೆ ನನಸಾದೀತು?

—ಮೇಘನಾ ಜಹಗೀರದಾರ, ಧಾರವಾಡ

## ನಿಂತ ನೀರಾದ ಧಾರಾವಾಹಿಗಳು

ಸುಮಾರು ವರ್ಷಗಳಿಂದ ಪ್ರಸಾರವಾಗುತ್ತಿರುವ ಅಮೃತ ವರ್ಷಿಣಿ, ಕುಲವಧು, ಅಗ್ನಿಸಾಕ್ಷಿ ಧಾರಾವಾಹಿಗಳು ಸೂತ್ರ ಇಲ್ಲದ ಗಾಳಿಪಟದಂತೆ ಹಾರಾಡುತ್ತಿವೆ. ನೋಡಬೇಕೆನ್ನುವ ಮೊದಲಿದ್ದ ಆಕರ್ಷಣೆ ಈಗಿಲ್ಲ. ಇದಕ್ಕೆ ಕಾರಣಗಳು ಗೊತ್ತಿದ್ದದ್ದೇ. ತಿಂಗಳಿಗೊಮ್ಮೆ ನೋಡಿದರೂ ಕಥೆಯಲ್ಲಿ ಬದಲಾವಣೆ ಕಂಡು ಬರುವುದಿಲ್ಲ. ನಿರ್ದೇಶಕರಲ್ಲಿ ಒಂದು ವಿನಂತಿ. ದಯವಿಟ್ಟು ಒಂದು ವಾರ ನಿಮ್ಮ ಧಾರಾವಾಹಿಯನ್ನು ನಮ್ಮ ಸ್ಥಾನದಲ್ಲಿ ಕುಳಿತು ವೀಕ್ಷಿಸಿರಿ. ನಿಮಗೆ ರಂಜಿಸುತ್ತಿದ್ದರೆ ಇನ್ನಷ್ಟು ಕಂತುಗಳನ್ನು ಹಿಗ್ಗಿಸಿ ಮುಂದುವರಿಸಿ. ಆದರೆ ನಮಗಂತೂ ಈ ನೀರಸ ಧಾರಾವಾಹಿಗಳಿಗೆ ಬೇಗ ಅಂತ್ಯ ಕಾಣಿಸಿದರೆ ನೆಮ್ಮದಿ ಸಿಗುವುದು. ಆಯ್ಕೆ ನಿಮಗೆ ಬಿಟ್ಟದ್ದು.

—ಡಾ. ಗಿರಿರಾಜ ಕುಲಕರ್ಣಿ, ಬೆಂಗಳೂರು

## ಹಾಸ್ಯಾಸ್ಪದ

ಕಲರ್ಸ್‌ನ 'ಕಿನ್ನರಿ'ಯಲ್ಲಿ ಮಣಿಯ ಕೊಲೆ ಪ್ರಯತ್ನದ ಆರೋಪದ ಮೇಲೆ ಪವನ್ ಮತ್ತು ಚಂದ್ರಳನ್ನು ಜೀವಾವಧಿ ಶಿಕ್ಷೆಗೆ ಗುರಿಪಡಿಸಿ, ಕಾರಾಗೃಹಕ್ಕೆ ತಳ್ಳಿದ್ದು ಹಾಸ್ಯಾಸ್ಪದ. ಆದರೆ ಪವನ್ ಎಂದಿಗೂ ಮಣಿಯ ಪರವಾಗಿ ನಿಂತು, ಅವಳಿಗೆ ಆಸರೆಯಾಗಿದ್ದ.

—ಪಿ.ವಿ. ಆಚಾರ್ಯ, ಬೆಂಗಳೂರು

## ಅನುಕರಣೀಯ

ಝೀ ಕನ್ನಡ ವಾಹಿನಿಯಲ್ಲಿ ಪ್ರಸಾರವಾದ 'ವಾರಸ್ದಾರ' ಧಾರಾವಾಹಿಯನ್ನು ಚೊಕ್ಕವಾಗಿ, ಅಚ್ಚುಕಟ್ಟಾಗಿ ಉಳಿದ ಧಾರಾವಾಹಿಗಳಂತೆ ಎಳೆದಾಡದೆ ಮುಗಿಸಿದ್ದು ಸಂತೋಷವಾಯಿತು. ಇದನ್ನೇ ಬೇರೆಯವರು ಪಾಲಿಸಿದರೆ ವಾಹ್! ಎಲ್ಲಾ ಪಾತ್ರಧಾರಿಗಳೂ ಅದ್ಭುತವಾಗಿ ನಟಿಸಿದ್ದಾರೆ.

—ಸೀತಾಕೇಶವ, ಸಿದ್ದಿ